ದೃಷ್ಟಿಯಿಂದ 'ಬ್ಲೇಡಾಗಲಿ ಕಾವ್ಯ' ಅಂದಿದ್ದೆ. ಇದ್ರಿಂದ ಕೆಲವರಿಗಾದ್ರೂ ಅನುಕೂಲ ಆಗುತ್ತೆ. ಅಂದ್ರೆ ಕಾವ್ಯಾನುಭವ ಎನ್ನುವಂಥದ್ದು ಲೋಕಾನುಭವವಲ್ಲ, ಲೌಕಿಕವಲ್ಲ. ವಚನದಲ್ಲಿ ಬಂದಿದೆ ನೋಡಿ 'ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ, ಚಿತ್ರದ ರೂಹು ಕಾಣಿರಣ್ಣ, ಚಿತ್ರದ ಕಬ್ಬು ಕಾಣಿರಣ್ಣ, ಅಪ್ಪಿದರೆ ಸುಖವಿಲ್ಲ, ಮೆಲಿದರೆ ಸವಿಯಿಲ್ಲ'. ಹಾಗಂತ ಕಾವ್ಯ ಎನ್ನುವುದು ಯಾವುದೋ ಅಮೂರ್ತ ಸಿದ್ಧಾಂತದ ಪ್ರತಿಪಾದನೆಯೂ ಅಲ್ಲ. ನನಗೊಬ್ರು ಕೇಳಿದ್ರು; 'ಕವಿತೆ ಏನೋ ಹೇಳ್ಬೇಕಲ್ಲ? ನಿಮ್ಮ ಕವಿತೆ ಏನು ಹೇಳುತ್ತೆ?' ಅಂತ. ಕವಿತೆ ಕವಿತೆಯನ್ನ ಹೇಳ್ತದೆ ಇನ್ನೇನ್ ಹೇಳ್ಬೇಕದು. ಸಂಗೀತದಲ್ಲಿ ಕುಮಾರ ಗಂಧರ್ವರು, ಮನ್ಸೂರರು, ಬಾಲಮುರಳಿಕೃಷ್ಣರು ಹಾಡಿದಾಗ ಅಲ್ಲಿ ಏನಿರುತ್ತೆ. ರಾಗ ಇರುತ್ತೆ. ರಾಗದರ್ಥ? ಅಂದ್ರೆ ಏನ್ ಹೇಳೋದು. ಅಲ್ಲೊಂದು ಅನುಭವ ತೀವ್ರವಾಗಿ ನಿಮಗೆ ತಾಗ್ತದೆ ಅಷ್ಟೇ ಅದರ ಸಾರ್ಥಕತೆ. ಕಾವ್ಯದಲ್ಲಿ ವಸ್ತು ಎನ್ನುವುದು ಒಂದು ನೆಪ. ಕಾವ್ಯ ಎನ್ನುವುದು ಲೌಕಿಕವೂ ಅಲ್ಲ, ಲೋಕೋತ್ತರವೂ ಅಲ್ಲ. ಅದು ಅಲೌಕಿಕ. ಆ ಸೂರ್ಯೋದಯ ಎಂಬುದು ಲೌಕಿಕ ಅಲ್ಲ, ಅದು ಅಲೌಕಿಕ. ಕಾವ್ಯ ಅಂದ್ರೆ ಅದರಲ್ಲಿ ಸಮಾಜ, ಯೋಗ, ಕಲ್ಪನೆ ಎಲ್ಲವೂ ಇದೆ. ಇದೆಲ್ಲ ಇದ್ದೂ ಅದಕ್ಕೆ ಅದರದೇ ಆದ ಚೌಕಟ್ಟು ಇದೆ. ಅನುಕರಣೆ ಅಲ್ಲ ಅದು. ಅಲೌಕಿಕ.

◆ **ನೀವು ಅನುಭಾವದ ಹುಡುಕಾಟಕ್ಕಾಗಿ ಏನೇನೊ ಪ್ರಯತ್ನ ಮಾಡಿದ್ರಿ. ನಿಮ್ಮ ಕಾವ್ಯ ಪಯಣಕ್ಕೆ ಇದರಿಂದ ಹೇಗೆ ಅನುಕೂಲವಾಯ್ತು?**

ಅದೆಲ್ಲ ನನ್ನ ವೈಯಕ್ತಿಕ ಬದುಕಿನ ಸಾಧನೆ. ಅದರಿಂದ ಏನಾಯ್ತು ಅನ್ನೋದನ್ನ ನಾನು ಹೇಗೆ ಹೇಳಲಿ?

◆ **ನಾನು ಏನನ್ನ ಕೇಳಲಿಕ್ಕೆ ಪ್ರಯತ್ನಿಸ್ತಿದ್ದೀನಿ ಅಂತಂದ್ರೆ ಇದೆಲ್ಲ ಯಾವ ಹುಡುಕಾಟದ ಭಾಗವಾಗಿ ನಿಮ್ಮ ಬದುಕಿನಲ್ಲಿ ಬಂತು ಅಂತ.**

ನಾನು ಬಾಲ್ಯದಿಂದಲೇ ಅನೇಕ ಸಾಧು ಸಂತರನ್ನು ನೋಡ್ದೆ. ಧಾರ್ಮಿಕ ವ್ಯಕ್ತಿಗಳನ್ನು ಕಂಡೆ. ನಾನು ಬೆಳೆದ ಪರಿಸರ ಹಾಗಿತ್ತು. ನನ್ನ ತಂದೆಯವರನ್ನೂ ಒಳಗೊಂಡಂತೆ ಅನೇಕರ ಆಷಾಢಭೂತಿತನ ಕಂಡು ನನಗೆ ಬೇಸರವಾಯ್ತು. ಏನಪ್ಪ ಇದೆಲ್ಲ ಅಂತ. ಶರಣರು ಹೇಳ್ತಾರೆ 'ನಡೆ ನುಡಿ ತಪ್ಪಿದಡೆ ಹಿಡಿದ ಇಷ್ಟಲಿಂಗ ಘಟಸರ್ಪವಾಯಿತ್ತಯ್ಯ' ಎಂದು. ಇವರಲ್ಲಿ ಇದೆಲ್ಲ ಇಲ್ವಲ್ಲ. ನಾವು ಆಡುವುದು ಮಾಡುವುದು ಒಂದೇ ಯಾಕೆ ಇಲ್ಲ. ಇದಕ್ಕೆ ಯೋಚನೆ ಮಾಡ್ದಂತೆ ನನಗೆ ಗೊತ್ತಾದದ್ದೇನೆಂದರೆ ಇವರೆಲ್ಲ ಧರ್ಮದ ಆಚರಣೆಯನ್ನೆ ಅಧ್ಯಾತ್ಮ ಎಂದು ನಂಬಿದ್ದಾರೆ. ಈ ಅಪಾಯಕಾರಿಯಾದ ನಂಬಿಕೆಯಿಂದ ನಾನು ಕಳಚಿಕೊಳ್ಳಬೇಕಾಗಿತ್ತು. ಜಗತ್ತಿನಲ್ಲಿ ಅನೇಕ ಅಪಾಯಗಳಾದದ್ದು ಧಾರ್ಮಿಕ ಅಂಧವಿಶ್ವಾಸದಿಂದ. ಭೌತಿಕ ಸಿದ್ಧಾಂತಗಳಲ್ಲಿರುವ ಅಂಧಶ್ರದ್ಧೆಯಿಂದ ಕೂಡ ಅಪಾಯವಾಗಿದೆ. ಮಾರ್ಕ್ಸ್‌ವಾದವೇ ಎಲ್ಲದಕ್ಕೂ ಉತ್ತರ, ಹಿಂದೂ ಧರ್ಮವೇ ಎಲ್ಲದಕ್ಕೂ ಉತ್ತರ, ಫ್ರಾಯ್ಡ್‌ನೇ ಎಲ್ಲದಕ್ಕೂ ಉತ್ತರ, ಇಸ್ಲಾಂನಲ್ಲಿ ಎಲ್ಲದಕ್ಕೂ ಉತ್ತರವಿದೆ, ಕ್ರೈಸ್ತ ಧರ್ಮ ಮಾತ್ರ ನಿಜವಾದದ್ದು ಅಥವಾ ಸ್ತ್ರೀವಾದವೇ ಎಲ್ಲದಕ್ಕೂ ಉತ್ತರ, ಪಶ್ಚಿಮದ ಸಿದ್ಧಾಂತಗಳೇ ಎಲ್ಲದಕ್ಕೂ ಉತ್ತರ, ಹೀಗೆ ಮಾತಾಡ್ತಾ ಹೋದ್ರೆ ಇದಕ್ಕೇನಾದರೂ ಅರ್ಥವಿದೆಯೆ? ಕೊರೊನಾಕ್ಕೆ ಪಶ್ಚಿಮದ ಸಿದ್ಧಾಂತಗಳಲ್ಲಿ ಏನರ್ಥವಿದೆ? ಪರಿಹಾರವಿದೆ? ಹೀಗಾಗಿ ಇಂಥ ಮಾನಸಿಕ ನಂಬಿಕೆಗಳು ನನಗೆ ಇಷ್ಟವಾಗೋಲ್ಲ. ನೋಡಿ ಇದು ಇನ್ನೊಂದು ರೀತಿಯ ಆಷಾಢಭೂತಿತನ. ಬೌದ್ಧಿಕ ಬದ್ಧತೆ ಕೂಡ ನಾನು ಒಪ್ಪೋದಿಲ್ಲ. ಬದ್ಧತೆ ನಮಗೆ ಎಲ್ಲಿ ಸ್ವಾತಂತ್ರ್ಯ ಕೊಡ್ತದೆ? ಅದು ಕೂಡ ಕಟ್ಟಿ ಹಾಕ್ತದೆ. ಸಿದ್ಧಾಂತಗಳು ಕೂಡ ಸೆರೆಮನೆಗಳಾದರೆ ಹೇಗೆ? ಹಾಗಾದರೆ ನಾವು ಎಲ್ಲಿ ನಿಲ್ಲಬೇಕು? ಎಲ್ಲಿಂದ